ಒಟ್ಟು ಪ್ರಶ್ನೆಗಳ ಸಂಖ್ಯೆ : 26 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
Total No. of Questions : 26 ] [ Total No. of Printed Pages : 8

**ಸಂಕೇತ ಸಂಖ್ಯೆ : 302-EK (RS)**
**Code No. : 302-EK (RS)**

**ಶಿಕ್ಷಣ**
**EDUCATION**

# ಮೂಲ ಪರಿಕಲ್ಪನೆಗಳ ಪರಿಚಯ
# INTRODUCTION TO BASIC CONCEPTS

(ಕನ್ನಡ ಮತ್ತು ಇಂಗ್ಲಿಷ್ ಭಾಷಾಂತರ)
( Kannada & English Versions )
**(ಪರಿಷ್ಕೃತ ಪಠ್ಯವಸ್ತು)**
**(Revised Syllabus)**

ದಿನಾಂಕ : 06. 06. 2017 ]
Date : 06. 06. 2017 ]
ಸಮಯ : ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ರವರೆಗೆ ] [ ಗರಿಷ್ಠ ಅಂಕಗಳು : 60
Time : 10.00 A.M. to 1.00 P.M. ] [ Max. Marks : 60

*ಅಭ್ಯರ್ಥಿಯ ನೋಂದಣಿ ಸಂಖ್ಯೆ*
*Register Number of the Candidate*

(ಕನ್ನಡ ಭಾಷಾಂತರ)
(Kannada Version)

**ಭಾಗ – I**

ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಒಂದು ಆಯ್ಕೆಯನ್ನು ಆರಿಸಿ ಬರೆಯಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ ನೀಡಲಾಗಿದೆ. ಪ್ರತಿ ಪ್ರಶ್ನೆಯೂ ಕಡ್ಡಾಯ : 10 × 1 = 10

1. ಪ್ರಪಂಚದ ಸ್ವರೂಪ ಕುರಿತ ವ್ಯಾಪಕ ನಂಬಿಕೆಗಳು ಹಾಗೂ ಮೌಲ್ಯಗಳ ವ್ಯವಸ್ಥೆಯನ್ನು ಹೀಗೆಂದು ಕರೆಯಲಾಗಿದೆ

   (A) ತತ್ವ (B) ತತ್ವಜ್ಞಾನ
   (C) ಧ್ಯೇಯ (D) ಪಠ್ಯಕ್ರಮ

2. ವಿವಿಧ ಜ್ಞಾನಗಳ ಕುರಿತ ಈ ಕೆಳಗಿನ ಯಾವ ಹೇಳಿಕೆ/ಗಳು ಸರಿಯಾಗಿದೆ/ವೆ ?

   I. ಪರಿಕಲ್ಪನಾತ್ಮಕ ಜ್ಞಾನವೆಂದರೆ ನಮ್ಮ ಜೀವನ ನಡೆಸಲು ಅಗತ್ಯವಾದ ಕೌಶಲಗಳ ಕಲಿಕೆಯಾಗಿದೆ.

   II. ಪರಜ್ಞಾನಾತ್ಮಕ ಜ್ಞಾನ ನಮ್ಮದೇ ಗ್ರಹಿಕೆಗಳನ್ನು ಅರಿಯುವುದಕ್ಕೆ ಸಂಬಂಧಿಸಿದ್ದು.

   III. ವಿಧಾನಾತ್ಮಕ ಜ್ಞಾನವೆಂದರೆ ಒಂದು 'ವಿಷಯವಸ್ತು'ವಿನ ಮೂಲ ಪರಿಕಲ್ಪನೆಗಳು ಮತ್ತು ತತ್ವಗಳನ್ನು ಗ್ರಹಿಸುವುದಾಗಿದೆ.

   *ಇವುಗಳಲ್ಲಿ :*

   (A) I ಮತ್ತು II (B) II ಮತ್ತು III
   (C) II ಮಾತ್ರ (D) IV ಮಾತ್ರ

3. ಒಂದು ಉಪಯುಕ್ತ ಮತ್ತು ಪ್ರಭಾವಶಾಲಿ ಶಿಕ್ಷಣವು
   (A) ಮಗುವಿನ ಭೌಗೋಳಿಕ ಮತ್ತು ಸಾಂಸ್ಕೃತಿಕ ವಾತಾವರಣದ ಬುನಾದಿಯನ್ನು ಆಧರಿಸಿದೆ
   (B) ಪಾಲಕರು, ಶಿಕ್ಷಕರು, ಸಹಪಾಠಿಗಳು ಮತ್ತು ಸಮುದಾಯದ ಅನ್ಯೋನ್ಯ ಕ್ರಿಯೆಯಿಂದ ಪೋಷಿಸುವಂತಹದು
   (C) ಮಕ್ಕಳಲ್ಲಿ ಜೀವನದ ಬಗ್ಗೆ ಸಂವೇದನೆಯನ್ನು ಮೂಡಿಸಿ ಅವುಗಳನ್ನು ಗಳಿಸುವ ಸಾಮರ್ಥ್ಯ ಬೆಳೆಸುತ್ತದೆ
   (D) ಇವುಗಳೆಲ್ಲವೂ

4. ಈ ಕೆಳಗಿನವುಗಳಲ್ಲಿ ಯಾವುದು ಮಕ್ಕಳಿಗೆ ಮೂಲಭೂತ ಹಕ್ಕು ನೀಡುವಲ್ಲಿ ಭಾರತವು ತನ್ನ ಬದ್ಧತೆಯನ್ನು ತೋರಿರುವುದನ್ನು ಸೂಚಿಸುತ್ತದೆ ?
   (A) ಶಿಶು ಮರಣ ದರ ಇಳಿಮುಖವಾಗಿದೆ
   (B) ಜನನ ದರ ಹೆಚ್ಚಗಿದೆ
   (C) ಭಾರತವು ಪ್ರಪಂಚದಲ್ಲಿನ ಅತೀ ಹೆಚ್ಚು ಸಂಖ್ಯೆಯ ಬಾಲಕಾರ್ಮಿಕರನ್ನು ಹೊಂದಿರುವ ದೇಶವಾಗಿದೆ
   (D) ಭಾರತದಲ್ಲಿ ಶೇಕಡಾ 65 ಹುಡುಗಿಯರು 18 ವರ್ಷಕ್ಕೆ ಮದುವೆಯಾಗಿರುತ್ತಾರೆ.

5. ಮಗುವೊಂದು ಸ್ಲೈಡ್‌ಗಳು, ಚಿತ್ರಪಟಗಳು, ಕರಪತ್ರಗಳು, ಪವರ್ ಪಾಯಿಂಟ್ ಸ್ಲೈಡ್‌ಗಳು ಮತ್ತು ಮಾದರಿಗಳ ಮೂಲಕ ಕಲಿಯಲು ಆದ್ಯತೆ ನೀಡುತ್ತದೆ. ವಿ.ಎ.ಆರ್.ಕೆ. ( VARK ) ಮಾದರಿಯ ಕಲಿಕಾ ಶೈಲಿಯ ಪ್ರಕಾರ ಮಗುವು
   (A) ವೀಕ್ಷಣಾ ಕಲಿಕಾರ್ಥಿ (B) ಸ್ಪರ್ಶದ ಕಲಿಕಾರ್ಥಿ
   (C) ಆಲಿಸುವಿಕೆಯ ಕಲಿಕಾರ್ಥಿ (D) ಓದು ಮತ್ತು ಬರಹದ ಕಲಿಕಾರ್ಥಿ

6. ಮಗುವೊಂದು ಚಿತ್ರವೊಂದನ್ನು ಬರೆಯುತ್ತಿದೆ ಮತ್ತು ಜೇಡಿಮಣ್ಣಿನಿಂದ ಗೊಂಬೆಯೊಂದನ್ನು ತಯಾರಿಸುತ್ತಿದೆ. ಈ ಕೆಳಗಿನ ಆಟಕ್ಕೆ ಇದು ಒಂದು ಉದಾಹರಣೆ
   (A) ದೈಹಿಕ ಆಟ (B) ಯುಕ್ತಿಯುತ ಆಟ
   (C) ಅಭಿವ್ಯಕ್ತಾತ್ಮಕ ಆಟ (D) ಸಾಂಕೇತಿಕ ಆಟ

7. ನೆರೆಯ ಖಾಸಗಿ ಶಾಲೆಗಳಲ್ಲಿ ಬಡಮಕ್ಕಳಿಗೆ ಪ್ರವೇಶಾತಿ ಒದಗಿಸುವುದನ್ನು ಕಡ್ಡಾಯಗೊಳಿಸುವುದರ ಉದ್ದೇಶವೇನೆಂದರೆ
   (A) ನಮ್ಮ ಶಾಲಾ ವ್ಯವಸ್ಥೆಯ ಶ್ರೇಣಿಕೃತ ಸ್ವರೂಪವನ್ನು ಕಡಿಮೆಗೊಳಿಸುವುದು
   (B) ಆಂಗ್ಲ ಮಾಧ್ಯಮ ಶಾಲೆಯಲ್ಲಿ ಮಕ್ಕಳು ಕಲಿಯುವಂತೆ ಮಾಡುವುದು
   (C) ಕಲಿಕೆಯಲ್ಲಿ ವೈವಿಧ್ಯತೆಯನ್ನು ತರುವುದು
   (D) ಖಾಸಗಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುವುದು

8. ವಿಶ್ಲೇಷಣಾತ್ಮಕ ಬುದ್ಧಿವಂತಿಕೆ ಎಂದರೆ
   (A) ಹೊಸ ಅನುಭವಗಳನ್ನು ನಿಭಾಯಿಸುವುದು
   (B) ಸನ್ನಿವೇಶವೊಂದಕ್ಕೆ ಹೊಂದಿಕೊಳ್ಳುವುದು
   (C) ಅಮೂರ್ತವಾಗಿ ಆಲೋಚಿಸುವ ಸಾಮರ್ಥ್ಯ
   (D) ಸಂಕೀರ್ಣ ಸನ್ನಿವೇಶಗಳನ್ನು ನಿಭಾಯಿಸುವುದು

9. ಸಾಧನಾ ಪರೀಕ್ಷೆಗೆ ಒಂದು ಉದಾಹರಣೆಯೆಂದರೆ
   (A) ನವೀನ ರೀತಿಯಲ್ಲಿ ಮಾದರಿಯೊಂದನ್ನು ತಯಾರಿಸುವುದು
   (B) ಕೃತಿ ಸಂಪುಟ ರಚನೆ
   (C) ಓದಿನ ದಾಖಲೆಯನ್ನು ವಹಿಸುವುದು
   (D) ಒಲಂಪಿಯಾಡ್‌ಗಳು

10. 6-14 ವರ್ಷ ವಯಸ್ಸಿನ ಗುಂಪಿನ ಮಕ್ಕಳಿಗೆ ಶಿಕ್ಷಣವು ಒಂದು ಮೂಲಭೂತ ಹಕ್ಕು ಎಂದು ಮಾಡಿದ ಕಾಯಿದೆ
   (A) ಸಂವಿಧಾನದ ಅನುಚ್ಛೇದ 256, 7ನೇ ಪರಿಚ್ಛೇದ
   (B) 76ನೇ ತಿದ್ದುಪಡಿ ಕಾಯಿದೆ
   (C) ಶಿಕ್ಷಣದ ಹಕ್ಕು ಅಧಿನಿಯಮ 2009
   (D) ಅನುಚ್ಛೇದ 15

## ಭಾಗ – II

ಈ ಕೆಳಗಿನವುಗಳಲ್ಲಿ ಯಾವುದಾದರೂ **ಐದು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ : 5 × 2 = 10

11. ಶಿಕ್ಷಕರಾದ ನಂತರ ಒಬ್ಬ ವೃತ್ತಿಪರ ಶಿಕ್ಷಕರಾಗಲು ನಿಮ್ಮನ್ನು ನೀವು ಹೇಗೆ ಸಂಸ್ಕರಿಸಿಕೊಂಡು ಉತ್ತಮಪಡಿಸಿಕೊಳ್ಳುವಿರಿ ?

12. 'ವಿವಿಧ ಕುಟುಂಬಗಳ ಹಿನ್ನೆಲೆಗೆ ಸೇರಿದ ಮಕ್ಕಳ ಇತರರೊಂದಿಗಿನ ಅನ್ಯೋನ್ಯ ಕ್ರಿಯೆಯು ಭಿನ್ನವಾಗಿರುವುದು.' ವಿಶ್ಲೇಷಿಸಿ.

13. ಸ್ವಯಂ ಮೌಲ್ಯಾಂಕನದ ಪ್ರಾಮುಖ್ಯತೆ ಏನು ?

14. ಬಹುವರ್ಗ ಬೋಧನೆಯ ನಾಲ್ಕು ತತ್ವಗಳನ್ನು ತಿಳಿಸಿ.

15. ಪ್ರತಿಭಾನ್ವಿತ ಮಕ್ಕಳ ನಾಲ್ಕು ಗುಣಲಕ್ಷಣಗಳನ್ನು ಪಟ್ಟಿಮಾಡಿ.

16. ಒಳಗೊಳ್ಳುವ ಪಾಠಯೋಜನೆಯೊಂದನ್ನು ತಯಾರಿಸುವಾಗ ನೀವು ಗಮನದಲ್ಲಿಡುವ ನಾಲ್ಕು ಅಂಶಗಳನ್ನು ಬರೆಯಿರಿ.

17. ಮೀಸಲಾತಿ ನೀತಿಯ ಎರಡು ಪ್ರಯೋಜನಗಳನ್ನು ವಿವರಿಸಿ.

18. ಪಠ್ಯಕ್ರಮದ ಯಾವುದಾದರೂ ಎರಡು ಪ್ರಾಮುಖ್ಯತೆಯನ್ನು ಬರೆಯಿರಿ.

## ಭಾಗ – III

ಈ ಕೆಳಗಿನ ಪ್ರತಿ ಪ್ರಶ್ನೆಗೂ ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಪ್ರಶ್ನೆ (a) ಅಥವಾ ಪ್ರಶ್ನೆ (b) ಗೆ ಉತ್ತರಿಸಿ. ಪ್ರತಿ ಉತ್ತರವು ಒಂದು ಪುಟ ಮೀರದಂತಿರಲಿ : 8 × 5 = 40

19. a) "ಗುರುತು ಏಕಕಾಲಕ್ಕೆ ಮಾನವನ ಎರಡು ಪ್ರಮುಖ ಉದ್ದೇಶಗಳಾದ – 'ಸೇರಿಕೊಳ್ಳುವ ಅಗತ್ಯತೆ' ಮತ್ತು 'ಅನನ್ಯದ ಅಗತ್ಯತೆ'ಗಳನ್ನು ಒಳಗೊಂಡಿರುತ್ತದೆ." ಈ ಹೇಳಿಕೆಯನ್ನು ವಿಶ್ಲೇಷಿಸಿ.

*ಅಥವಾ*

   b) "ಶಾಲಾ ಪರಿಸರದಲ್ಲಿನ ಸಾಮಾಜೀಕರಣದ ಬಹು ಪ್ರಮುಖ ಅಂಶವೆಂದರೆ ಶಿಕ್ಷಕ– ವಿದ್ಯಾರ್ಥಿಗಳ ಸಂಬಂಧ." ಈ ಹೇಳಿಕೆಯನ್ನು ಸಮರ್ಥಿಸಿ.

20. a) ವೈವಿಧ್ಯತೆಯನ್ನು ಒಂದು ಒಳಗೊಳ್ಳುವ ತರಗತಿಯಲ್ಲಿ ಸಮಸ್ಯೆ ಎಂದು ಪರಿಗಣಿಸುವ ಬದಲಾಗಿ, ಸಂಪನ್ಮೂಲಗಳಾಗಿ ಬಳಕೆಯಾಗಬೇಕು. ನಿಮ್ಮ ಉತ್ತರವನ್ನು ಉದಾಹರಣೆಗಳೊಂದಿಗೆ ನಿದರ್ಶಿಸಿ.

***ಅಥವಾ***

b) ಪ್ರತಿಭಾನ್ವಿತ ಮಕ್ಕಳಿಗೆ ಒಬ್ಬ ಶಿಕ್ಷಕರಾಗಿ ಶಿಕ್ಷಣವನ್ನು ಒಳಗೊಳ್ಳುವ ಶಿಕ್ಷಣವನ್ನಾಗಿ ಹೇಗೆ ಮಾಡುವಿರಿ ? ನಿಮ್ಮ ಉತ್ತರವನ್ನು ನಿದರ್ಶಿಸಿ.

21. a) ತಾರುಣ್ಯಾವಸ್ಥೆಯು ಒತ್ತಡ ಮತ್ತು ಕ್ಷೋಭೆಯಿಂದ ಕೂಡಿದ ಅವಧಿಯಾಗಿದೆ. ವಿವರಿಸಿ.

***ಅಥವಾ***

b) ಕಲಿಕೆ ಒಂದು ಪ್ರಕ್ರಿಯೆ ಹಾಗೂ ಉತ್ಪನ್ನವೂ ಹೌದು. ವಿವರಿಸಿ.

22. a) ನಿಮ್ಮ ತರಗತಿಯ ಬಾಲಕ ಮತ್ತು ಬಾಲಕಿಯರಲ್ಲಿ ಲಿಂಗ ಸಂವೇದನೆಯನ್ನು ನೀವು ಹೇಗೆ ಬೆಳೆಸುವಿರಿ ?

***ಅಥವಾ***

b) ಒಳಗೊಳ್ಳುವಿಕೆಗಿರುವ ಭೌತಿಕ ತಡೆಗಳನ್ನು ಪರಿಹರಿಸಲು ನೀವು ಅನುಸರಿಸುವ ಐದು ಕ್ರಮಗಳನ್ನು ಪಟ್ಟಿಮಾಡಿ.

23. a) 'ವಿವಿಧ ಕಲಿಕಾರ್ಥಿಗಳು ವಿವಿಧ ಕಲಿಕಾಗತಿಯನ್ನು ಹೊಂದಿರುತ್ತಾರೆ.' ಈ ಸಂದರ್ಭದಲ್ಲಿನ ಜಾಗರೂಕ ಯೋಜನೆಯ ಪಾತ್ರವನ್ನು ವಿಶ್ಲೇಷಿಸಿ.

***ಅಥವಾ***

b) ಮಕ್ಕಳ ವ್ಯಕ್ತಿತ್ವದ ವಿಭಿನ್ನ ಪ್ರಕಾರಗಳ ಬೆಳವಣಿಗೆಯಲ್ಲಿ ಆಟದ ಪಾತ್ರವನ್ನು ಮೌಲ್ಯಾಂಕಿಸಿ.

24. a) ನಾಗರೀಕರ ಎರಡು ಮೂಲಭೂತ ಕರ್ತವ್ಯಗಳನ್ನು ತಿಳಿಸಿ. ವಿದ್ಯಾರ್ಥಿಗಳ ಮನಸ್ಸಿನಲ್ಲಿ ಶಿಕ್ಷಕರಾಗಿ ಈ ಕರ್ತವ್ಯಗಳನ್ನು ಹೇಗೆ ಹುಟ್ಟು ಹಾಕುವಿರಿ ?

***ಅಥವಾ***

b) ಸಮಾನತೆಯ ಮೌಲ್ಯಗಳನ್ನು ಆಚರಿಸುವ ತರಗತಿಗಳನ್ನು ಶಿಕ್ಷಕರಾಗಿ ನೀವು ಹೇಗೆ ಸೃಷ್ಟಿಸುವಿರಿ ?

25. a) 'ಶಾಲೆಯು ಪ್ರತಿ ಮಗುವಿಗೆ ಸಂರಚಿತ ಶೈಕ್ಷಣಿಕ ಅನುಭವ ನೀಡುವ ಔಪಚಾರಿಕ ಪ್ರಕ್ರಿಯೆ'. ವಿಶ್ಲೇಷಿಸಿ.

***ಅಥವಾ***

b) ಶಾಲಾ ಪ್ರಕ್ರಿಯೆಯಲ್ಲಿ ಶಿಕ್ಷಕರು ಬಹು ಪ್ರಮುಖವಾದ ಕೊಂಡಿ ಮತ್ತು ಅವರು ಸ್ವಾವಲೋಕನ ವೃತ್ತಿಪರರಾಗಿರಬೇಕು. ಸಮರ್ಥಿಸಿ.

26. a) ಶಿಕ್ಷಣದಲ್ಲಿ ಸಮಾಜಶಾಸ್ತ್ರದ ವ್ಯಾಪ್ತಿಯ ಐದು ಅಂಶಗಳನ್ನು ವಿವರಿಸಿ.

***ಅಥವಾ***

b) ಕಲಿಕೆಯು ಮೂಲಭೂತವಾಗಿ ಒಂದು ಸಾಮಾಜಿಕ ಪ್ರಕ್ರಿಯೆ. ವಿವರಿಸಿ.

**( English Version )**

**PART – I**

Four choices have been given for each of the following questions. Choose the most appropriate answer and write in the answer-book. All the questions are compulsory. $10 \times 1 = 10$

1. The system of broad beliefs and values about the nature of the world is known as
   (A) Principle
   (B) Philosophy
   (C) Ideology
   (D) Curriculum.

2. Which of the following statements is/are true about the different kinds of knowledge ?
   I. Conceptual knowledge refers to skills that we need to lead our lives
   II. Metacognitive knowledge refers to an awareness of our own understanding
   III. Procedural knowledge is the understanding of the basic concepts and principle of a subject matter.

   (A) I and II
   (B) II and III
   (C) II only
   (D) IV only.

3. Useful and effective school education is
   (A) rooted in the physical and cultural environment of the child
   (B) nourished through interactions with parents, teachers and community
   (C) to make sense of life and develop child's potential
   (D) all of these.

4. Which of the following indicates that India has made significant commitment towards ensuring the basic rights of children ?
   (A) Infant mortality rates are down
   (B) Birth rate is high
   (C) India is home to the highest number of child labourers in the world
   (D) 65% of girls in India are married by the age of 18.

5. A child prefers to learn through slides, diagrams, power point presentation and models. According to VARK model of learning style the child is a
   (A) Visual learner
   (B) Kinesthetic learner
   (C) Auditory learner
   (D) Reading and writing learner.

6. A child is drawing a picture and preparing toys out of clay. It is an example for
   (A) physical play
   (B) manipulative play
   (C) expressive play
   (D) symbolic play.

7. The purpose of admitting poor children in neighbourhood private schools by making it mandatory for the school is to
   (A) reduce the extremely hierarchical nature of our schooling system
   (B) make children learn in English medium school
   (C) bring variety in learning
   (D) increase the number of students in private school.

8. Analytic Intelligence refers to
   (A) coping with new experiences
   (B) adapting to a context
   (C) the ability to think abstractly
   (D) coping with complex situations.

9. An example for the achievement test is
   (A) preparation of a model in a novel way
   (B) portfolios
   (C) writing a reading log
   (D) olympiads.

10. The act which made education a fundamental right for children in the age group of 6 - 14 years is
   (A) Article 256, 7th Schedule of the Constitution
   (B) 76th Amendment Act
   (C) Right to Education Act, 2009
   (D) Article 15

**PART – II**

Answer any *five* of the following questions briefly, each answer not exceeding *half a* page. $5 \times 2 = 10$

11. After you become a teacher how would you strive to refine and improve yourself as a professional teacher ?
12. 'Children who belong to different family set-up vary in terms of how they interact with others.' Analyse.
13. What is the importance of Self-Assessment ?
14. Mention four principles of Multi-grade teaching.
15. List out four characteristics of gifted children.
16. Write four factors that would be kept in mind while preparing an inclusive lesson plan.
17. Explain any two benefits of the reservation policy.
18. Write any two importances of curriculum.

**PART – III**

There is an alternate question for each of the following. Answer either 'a' or 'b', each answer not exceeding *one* page. $8 \times 5 = 40$

19. (a) 'Identity covers simultaneously two core human motives — the need to belong and the need to be unique.' Analyse the statement.

*OR*

(b) 'The most important factor of socialisation in school environment is the Teacher-Student relationship.' Analyse the statement.

20. (a) Diversity in an inclusive classroom becomes a resource to be tapped rather than a problem to be addressed. Illustrate your answer with examples.

*OR*

(b) Being a teacher how would you make education more inclusive for gifted children ? Illustrate your answer.

21. (a) Adolescence is a period of stress and storm. Explain.

*OR*

(b) Learning is a process as well as a product. Explain.

22. (a) How would you develop gender sensitization among boys and girls in your class ? List *five* measures.

*OR*

(b) List out *five* measures that you would follow to overcome the physical barriers to inclusion.

23. (a) Different learners have different speed of learning. Evaluate the role of careful planning in this situation.

*OR*

(b) Evaluate the role of play in the development of different dimensions of personality among children.

24. (a) Mention two fundamental duties of citizen. As a teacher how would you instill these duties in the minds of students ?

*OR*

(b) As a teacher how would you create a classroom that practises egalitarian values ?

25. (a) 'Schooling is a formal process of providing structured educational experience to every child.' Analyse the statement.

*OR*

(b) Teacher is the most crucial link in the process of schooling and need to be a reflective practitioner. Justify.

26. (a) Explain any five aspects of scope of Sociology in Education.

*OR*

(b) Learning is basically a social process. Explain.